ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನ 'ಅ' ಎಂಬ ಪ್ರಶ್ನೆಗೆ ಉತ್ತರ ಈ ರೀತಿ ಇದೆ. ಕರ್ನಾಟಕ ರಾಜ್ಯದ ದೇವಸ್ಥಾನಗಳ ದುರಸ್ತಿ ಜೀರ್ಣೋದ್ಧಾರಕ್ಕೆ ರೂಪಾಯಿ 31 ಲಕ್ಷ ಮತ್ತು 43 ಲಕ್ಷ 1991-92ರ ಸಾಲಿಗೆ ಧಾರ್ಮಿಕ ದತ್ತಿ ಇಲಾಖೆಯವರು ನೀಡಿದ್ದಾರೆ. ಇದರಿಂದ ಪ್ರತಿ ಜಿಲ್ಲೆಗೆ ಸುಮಾರು 4 ಲಕ್ಷ ರೂಪಾಯಿ ಬಂದಂತಾಗುತ್ತದೆ. ಆದರೆ ಗುಲ್ಬರ್ಗ ಜಿಲ್ಲೆಗೆ ಕೇವಲ 2.5 ಲಕ್ಷ ರೂಪಾಯಿಯನ್ನು ಅನುದಾನವನ್ನು ನೀಡಿದ್ದು ಏಕೆ? ಮುಂದಾದರೂ ಸಹ ಹೈದರಾಬಾದ್ ಕರ್ನಾಟಕವಾದ ಹಿಂದುಳಿದ ಪ್ರದೇಶವನ್ನು ಕಡೆಗಣಿಸಬಾರದೆಂದು ತಮ್ಮ ಮುಖಾಂತರ ಮಂತ್ರಿಯವರನ್ನು ವಿನಂತಿಸುತ್ತೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಣಿಯವರೆ, 1991-92ರ ಸಾಲಿನಲ್ಲಿ ಜೀರ್ಣೋದ್ಧಾರಕ್ಕಾಗಿ 31 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 43 ಲಕ್ಷ ರೂಪಾಯಿಯನ್ನು ಈಗಾಗಲೇ ಅನುದಾನವನ್ನಾಗಿ ಬಿಡುಗಡೆ ಮಾಡಲಾಗಿದೆ. ಆದರಲ್ಲಿ ಗುಲ್ಬರ್ಗ ಜಿಲ್ಲೆಗೆ ಜೀರ್ಣೋದ್ಧಾರಕ್ಕಾಗಿ 2.5 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 2.15 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಲಾಗಿದೆ. ಬೇಡಿಕೆ ಬಂದರೆ ಮತ್ತು ಪ್ರಸ್ತಾವನೆಯನ್ನು ಪರಿಗಣಿಸಿ ತದನಂತರ ಮತ್ತೊಂದು ಸಾರಿ ಅನುದಾನದ ಪಟ್ಟಿಯನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಉಪಾಧ್ಯಕ್ಷಣಿಯವರೆ, 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆಯ ದೇವಸ್ಥಾನಗಳ ರಿಪೇರಿ, ಜೀರ್ಣೋದ್ಧಾರಕ್ಕಾಗಿ ನೀಡಿರುವ ಹಣದಲ್ಲಿ ತಾಲ್ಲೂಕುವಾರು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ಸೇಡಂ ತಾಲ್ಲೂಕನ್ನು ಕಡೆಗಣಿಸಲಾಗಿದೆ. ಸೇಡಂ ತಾಲ್ಲೂಕಿಗೆ ಹಣವನ್ನು ನೀಡಿಲ್ಲ. ಮತ್ತು ನಾನು 1991-92ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿರುವ ಪುರಾತನ ಹಾಗೂ ಪ್ರಖ್ಯಾತ ದೇವಸ್ಥಾನಗಳಿಗೆ ಜೀರ್ಣೋದ್ಧಾರ ಹಣವನ್ನು ನೀಡಲು ಕೋರಿದ್ದೆ. ಆದರೆ ಏತಕ್ಕೆ ಇನ್ನು ಹಣವನ್ನು ನೀಡಿಲ್ಲ?

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಣಿಯವರೆ, ಶಾಸಕರಿಂದ, ಗ್ರಾಮಸ್ಥರಿಂದ ಮತ್ತು ಸಾರ್ವಜನಿಕರಿಂದ ಬಂದಂಥ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುದಾನ ನೀಡಲಾಗುತ್ತಿದೆ. ಅದೇ ರೀತಿ ಗುಲ್ಬರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳಿಗೆ ನೀಡಿದ್ದೇವೆ. ಮತ್ತು ಸೇಡಂ ತಾಲ್ಲೂಕಿಗೆ ಅಚಾತುರ್ಯವಾಗಿ ಹಣ ಹೋದ ಪಟ್ಟಿಯಲ್ಲಿಲ್ಲದಿದ್ದರೆ, ನಂತರ ಹಣವನ್ನು ಬಿಡುಗಡೆ ಮಾಡತಕ್ಕಂಥಾದ್ದರ ಬಗ್ಗೆ ಅವರ ಕೋರಿಕೆಯನ್ನು ಮನ್ನಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಯೋಜನೆಯಡಿಯಲ್ಲಿ ಈ ಒಂದು ಪ್ರೋಗ್ರಾಂ ಬಳಸಬಾರದೆಂದು ಕ್ಷೇತ್ರವಾರು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ.

ವಾರಣಾಸಿ ಛತ್ರದ ನಿರ್ವಹಣೆ

254 (1594) ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ವಾರಣಾಸಿಯ ಛತ್ರದಲ್ಲಿ ಯಾತ್ರಿಕರಿಗೆ ತಂಗುವ ವ್ಯವಸ್ಥೆ ಸರಿಯಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಛತ್ರದ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆ ತಯಾರಿಸಿದೆಯೇ?

ಇ) ರಾಜ್ಯ ಸರ್ಕಾರಕ್ಕೆ ವಾರಣಾಸಿಯಲ್ಲಿ ಉತ್ತಮ ಸ್ಥಳ ದೊರಕಿದ್ದರೂ ಈ ತನಕ ಈ ಜಾಗದಲ್ಲಿ ಉತ್ತಮ ವ್ಯವಸ್ಥೆ ಮಾಡದಿರಲು ಕಾರಣವೇನು?

ಈ) ಇಲ್ಲಿ ಉತ್ತಮ ವ್ಯವಸ್ಥೆ ಮಾಡಿದರೆ ಕರ್ನಾಟಕದ ಜನರಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚಲು ಸಾಧ್ಯವಿಲ್ಲವೇ?

ಶ್ರೀ ರಾಜಾ ಅಮರೇಶ ನಾಯಕ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಈ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಯೋಜಿಸಲಾಗಿದೆ.

1) ಬೋರ್‌ವೆಲ್ ತೋಡಿಸುವುದು.

2) ರಾಜ್ಯ ಛತ್ರದ ದುರಸ್ತಿ.

3) ಹೆಚ್ಚುವರಿ ಕೊಠಡಿಗಳನ್ನು ಒದಗಿಸುವುದು.

ಇ) ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ರೂ. 25.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಈಗ ಛತ್ರದ ನಿಧಿಯಲ್ಲಿ ಹಣದ ಕೊರತೆಯಿರುವುದರಿಂದ ಈ ವ್ಯವಸ್ಥೆ ಮಾಡಲು ತಡವಾಗಿರುತ್ತದೆ.

ಈ) ಹೌದು.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಉಪಾಧ್ಯಕ್ಷೆಯವರೆ, ನನ್ನ ಒಂದನೇ ಪ್ರಶ್ನೆ ಏನೆಂದರೆ, ವಾರಣಾಸಿಯ ಛತ್ರದಲ್ಲಿ ಯಾತ್ರಿಕರಿಗೆ ತಂಗುವ ವ್ಯವಸ್ಥೆ ಸರಿಯಿಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದಕ್ಕೆ ಉತ್ತರ 'ಹೌದು' ಎಂದು ಕೊಟ್ಟಿದ್ದಾರೆ. ಈ ಛತ್ರದ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆ ತಯಾರಿಸಿದೆಯೇ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಈ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಯೋಜಿಸಲಾಗಿದೆಯೆಂದು ಹೇಳಿದ್ದಾರೆ.

1) ಬೋರ್‌ವೆಲ್ ತೋಡಿಸುವುದು.

2) ರಾಜ್ಯ ಛತ್ರದ ದುರಸ್ತಿ ಮತ್ತು

3) ಹೆಚ್ಚುವರಿ ಕೊಠಡಿಗಳನ್ನು ಒದಗಿಸುವುದು.

ಹಿಂದುಗಳ ಅತ್ಯಂತ ಪವಿತ್ರ ಕ್ಷೇತ್ರವಾದ 'ಕಾಶಿ'ಗೆ ಹೋದಾಗ ನಮ್ಮ ಕರ್ನಾಟಕಕ್ಕೆ ಬಹಳ ಉತ್ತಮವಾದಂಥ ಆಯಕಟ್ಟಿನ ಸ್ಥಳದಲ್ಲಿ ಛತ್ರದ ಸ್ಥಳ ಒದಗಿದೆ; ಆದರೆ, ಆ ಬೋರ್‌ವೆಲ್ ಸರಿಯಿಲ್ಲದೆ ಅಲ್ಲಿ ಹೋದವರಿಗೆ ಸ್ನಾನದ ತೊಂದರೆಯಿಂದಾಗಿ ಗಂಗೆಯಲ್ಲಿ ಮಿಾಯುವಂಥ ಪರಿಸ್ಥಿತಿ ಬಂದೊದಗಿದೆ. ಅಲ್ಲದೆ, ಛತ್ರ ಬಹಳಷ್ಟು ಕೆಟ್ಟ ಸ್ಥಿತಿಯಲ್ಲಿದೆ. ಅಲ್ಲಿಗೆ ಹೋದವರಿಗೆ ತಂಗುವುದಕ್ಕೆ ಅನುಕೂಲವಾಗಿರುವುದಿಲ್ಲ. ಹೆಚ್ಚುವರಿ ಕೊಠಡಿಗಳನ್ನು ಮಾಡಿಸುವಂಥ ಯೋಜನೆಗೆ ಶಂಕುಸ್ಥಾಪನೆ ಹಾಕಿದಂತಹ ಹಲಗೆ ಮಾತ್ರ ಕಾಣಿಸುತ್ತಿದೆ. ಮೇಲುವಾರಿ ಕಟ್ಟಡ ಇನ್ನೂ ಸಹ ತಲೆ ಎತ್ತಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಆ ಬಗ್ಗೆ ಸರ್ಕಾರದವರು ಯಾವುದಾದರೂ ಖಾತೆಯಲ್ಲಿ ಹಣವನ್ನು ಇಟ್ಟಂತೆ ನನಗೆ ಕಾಣಿಸುವುದಿಲ್ಲ. ಆದುದರಿಂದ, ಈ ಕೆಲಸ ತ್ವರಿತ ಗತಿಯಲ್ಲಿ ಆಗಬೇಕಾಗಿದೆ. ನೆರೆ ರಾಜ್ಯಗಳಲ್ಲಿ

ಕರ್ನಾಟಕದ ಛತ್ರ ಉತ್ತಮ ಸ್ಥಿತಿಯಲ್ಲಿದ್ದರೂ ಕಾಶಿಯಲ್ಲಿರುವಂಥ ಅತ್ಯುತ್ತಮ ಸ್ಥಳದಲ್ಲಿರುವ ಛತ್ರವನ್ನು ಕಡೆಗಣಿಸಿದ ಹಾಗೆ ಕಾಣುತ್ತದೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಎಂಬುದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಬಯಸುತ್ತೇವೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಶಾಸಕ ಮಿತ್ರರು ಹೇಳಿದಂತೆ ಅಲ್ಲಿ ಸೌಲಭ್ಯ ಕುಂಠಿತವಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಈ ದಿಸೆಯಲ್ಲಿ ಆ ಕ್ಷೇತ್ರಕ್ಕೆ ಬರತಕ್ಕಂಥ ಪ್ರವಾಸಿಗರಿಗೆ, ಯಾತ್ರಾರ್ಥಿಗಳಿಗೆ ಉತ್ತಮವಾದಂಥ ಒಂದು ಸೌಲಭ್ಯವನ್ನು ನೀಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹಣಕಾಸಿನ ತೊಂದರೆಯಿಂದ ಈ ಕಾರ್ಯ ಕುಂಠಿತಗೊಂಡಿದೆ. ಮುಂದಿನ ವರ್ಷಗಳಲ್ಲಿ ಆ ಒಂದು ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಡುತ್ತೇವೆಂದು ಹೇಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಮಂತ್ರಿಗಳು ಮುಂದಿನ ವರ್ಷಗಳಲ್ಲಿ ಮಾಡಿಕೊಂಡುತ್ತೇವೆಂದು ಹೇಳಿದರು. ಆದರೆ, ಈ ವರ್ಷದ ಬಜೆಟ್‌ನಲ್ಲಿ ಯಾವುದೂ ಕಾಣಿಸುವುದಿಲ್ಲ. ಈ ಸೌಲಭ್ಯ ಅತ್ಯಾವಶ್ಯಕವಾಗಿದೆ. ಅಲ್ಲಿರತಕ್ಕ ಬೋರ್‌ವೆಲ್ ಸರಿಯಾಗಿ ಉಪಯೋಗವಾಗುವುದಿಲ್ಲ, ಆದ್ದರಿಂದ, ಅದನ್ನು ಸರಿಪಡಿಸಬೇಕು. ನಮ್ಮಂಥವರು ಹೋದರೆ ಆ ಕೋಣೆಯಲ್ಲಿ ವಾಸ ಮಾಡಲಿಕ್ಕೂ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಆದುದರಿಂದ, ತಾವೆ ಒಂದು ಸಲ ವಾರಣಾಸಿಗೆ ಹೋಗಿ, ಒಂದು ದಿವಸ ಅಲ್ಲಿರುವ ಛತ್ರದಲ್ಲಿ ತಂಗಿದ್ದು, ಕಾಶಿಯಲ್ಲಿರುವ ನಮ್ಮ ಛತ್ರಕ್ಕೆ ಮೋಕ್ಷ ಕೊಡುವಂಥ ಕೆಲಸವನ್ನು ತಮ್ಮ ಕಾಲದಲ್ಲಾದರೂ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೇ ಅಲ್ಲಿರತಕ್ಕ ಕಟ್ಟಡದ ದುರಸ್ತಿಯ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ ಮತ್ತು ಅವರು ನೀರಿನ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ಹಣವನ್ನು ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಹಾಕಿಸಿ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಉಪಾಧ್ಯಕ್ಷಿಣಿಯವರು : ಶ್ರೀ ಕೆ.ಹೆಚ್. ಕುರುಡಗಿಯವರ 256 (1584) ನೇ ಪ್ರಶ್ನೆಗೆ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ.

ಬಂಗಾರಪ್ಪ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ

257 (1425) ಶ್ರೀ ಬಸವರಾಜ ಹಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯ ಬಗ್ಗೆ ಬಂಗಾರಪ್ಪ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇಚ್ಛೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಅದನ್ನು ಅನುಷ್ಠಾನಗೊಳಿಸಲಾಗುವುದು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಬಂಗಾರಪ್ಪ ಸಮಿತಿಯು ತಾತ್ಕಾಲಿಕವಾಗಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಸೂಚಿಸುವ ವಿಧಾನವನ್ನು ಶಿಫಾರಸ್ಸು ಮಾಡಿತ್ತು.